ಇಡೀದಿನ ಆಕೆ ಟೀವಿ ನೋಡುವುದು ಚಂದ್ರಕಾಂತನಿಗೆ ಇಷ್ಟವಿರಲಿಲ್ಲ. 'ಹಾಳಾಗಿ ಹೋಗುತ್ತೀಯಾ' ಅನ್ನುತ್ತಿದ್ದ. ಅದರ ಬದಲಿಗೆ ಯಾವುದಾದರೂ ಪುಸ್ತಕ ಓದು ಅನ್ನುತ್ತಿದ್ದ. ಆಕೆ ಅದನ್ನೂ ಪ್ರಯತ್ನಿಸಿದಳು. ಪುಸ್ತಕ ಹೋಗಲಿ, ಟೀವಿಯ ಮುಂದೆ ಕುಂತರೂ ಆಕೆಗೆ ಮಧ್ಯಾಹ್ನದ ಊಟವಾದ ನಂತರ ನಿದ್ರೆ ಒತ್ತರಿಸಿಕೊಂಡು ಬರುತ್ತಿತ್ತು. 'ಮಧ್ಯಾಹ್ನ ಮಲಗಬೇಡ ದಪ್ಪವಾಗುತ್ತೀಯಾ' ಅನ್ನುತ್ತಿದ್ದ ಚಂದ್ರಕಾಂತ. ಕಸಬಾಕ್ಕೆ ಬಂದಮೇಲೆ ಚೇತನಾ ತುಸು ತೂಕ ಹೆಚ್ಚಿಸಿಕೊಂಡಿದ್ದು ನಿಜವಾದರೂ, ಮಧ್ಯಾಹ್ನದ ನಿದ್ದೆಯೇ ಅದಕ್ಕೆ ಕಾರಣ ಎಂಬ ನಿರ್ಣಯ ಕೊಟ್ಟಿದ್ದ ಚಂದ್ರಕಾಂತ. 'ನಾನು ಬರುವುದು ಹೇಗಾದರೂ ತಡವಾಗುತ್ತೆ. ಸಂಜೆಯ ಹೊತ್ತು ಜಾಗಿಂಗಿಗೆ ಹೋಗು' ಅನ್ನುತ್ತಿದ್ದ. ಆತನ ಒತ್ತಾಯಕ್ಕೆ ಅದನ್ನೂ ಕೆಲ ದಿನ ಮಾಡಿದಳಾದರೂ, ಜಾಗಿಂಗಿಗೆ ಹೋಗುವುದು ಅತ್ಯಂತ ಸಂಕೋಚದ ಕ್ರಿಯೆಯಾಗಿತ್ತು ಆಕೆಗೆ. ಪಾರ್ಕಿನಲ್ಲಿ ಮತ್ಯಾವ ಹೆಂಗಸರೂ ಕಾಣಸಿಗುತ್ತಿರಲಿಲ್ಲ. ತಾನು ಒಬ್ಬಳೇ ನಡೆಯುವಾಗ ಅಲ್ಲಿಯ ಜನರು ತನ್ನನ್ನೇ ನೋಡುತ್ತಿದ್ದಾರೆ ಅನ್ನಿಸುತ್ತಿತ್ತು. 'ಅಂಗಡಿ ಬ್ಯಾಂಕುಗಳಂತೂ ಇಲ್ಲವೆಂದಾಯಿತು, ಜಾಗಿಂಗಿಗೆ ಹೋಗಲು ಹಿಂಜರಿಯುತ್ತೀಯಲ್ಲ...' ಎಂದು ಬೇಸರಿಸುತ್ತಿದ್ದ ಚಂದ್ರಕಾಂತ.

ಒಬ್ಬಳೇ ಇರುತ್ತಾಳೆಂದು ಆಫೀಸಿನಿಂದ ದಿನಕ್ಕೆರಡುಬಾರಿಯಾದರೂ ಫೋನ್ ಮಾಡುತ್ತಿದ್ದ ಆತ. ಮಾತನಾಡಲು ಹೆಚ್ಚಿನ ವಿಷಯಗಳೇನೂ ಇರುತ್ತಿರಲಿಲ್ಲ. 'ತಿಂಡಿ ಆಯ್ತಾ, ಅಡುಗೆ ಏನು ಮಾಡಿದೆ?' ಇತ್ಯಾದಿಗಳಿಂದ ಶುರುವಾಗಿ ಕೊನೆಗೆ, 'ಮಧ್ಯಾಹ್ನ ಮಲಗಲಿಲ್ಲ ತಾನೇ?... ಟೀವಿ ಎಷ್ಟು ಹೊತ್ತು ನೋಡಿದೆ? ಇವತ್ತು ಎಷ್ಟು ಅರೇಬಿಕ್ ಶಬ್ದಗಳನ್ನು ಕಲಿತೆ?' ಎನ್ನುವುದರೊಂದಿಗೇ ಮಾತುಕತೆ ಅಂತ್ಯವಾಗುತ್ತಿತ್ತು. ಒಮ್ಮೊಮ್ಮೆಯಂತೂ ಬೇಕಂತಲೇ ಆತ ಮಧ್ಯಾಹ್ನ ಆಕೆ ಮಲಗಿರಬಹುದಾದ ಹೊತ್ತಿನಲ್ಲಿಯೇ ಫೋನ್ ಮಾಡುತ್ತಿದ್ದ.

ಚೇತನಾಳ ಒಂಟಿತನವನ್ನು ಹೋಗಲಾಡಿಸುವ ಹಾಗೂ ಅವಳನ್ನು ಹೊರ ಜಗತ್ತಿನೊಂದಿಗೆ ಬೆರೆಸುವ ಚಂದ್ರಕಾಂತನ ಪ್ರಯತ್ನಗಳೆಲ್ಲ ಒಂದಲ್ಲ ಒಂದು ಕಾರಣಕ್ಕೆ ವಿಫಲವಾಗುತ್ತಲೇ ಇದ್ದವು. ಇಂಟರ್‌ನೆಟ್ಟು ಟೆಲಿಕಮ್ಯುನಿಕೇಷನ್ನಿನ ಕ್ರಾಂತಿಯಾಗಿರದ ಆ ದಿನಗಳಲ್ಲಿ ಅಂತರರಾಷ್ಟ್ರೀಯ ಕರೆಗಳನ್ನು ಮಾಡುವುದು ಅತ್ಯಂತ ದುಬಾರಿಯಾಗಿತ್ತು. ಆದರೆ ಭಾರತೀಯರಿಗೆ ತಮ್ಮ ಊರುಗಳಿಗೆ ಕಡಿಮೆ ದರದಲ್ಲಿ ಕರೆ ಮಾಡುವ ಕಳ್ಳ ವ್ಯವಸ್ಥೆಯೊಂದು ಜಾರಿಯಲ್ಲಿತ್ತು. ಅದನ್ನು 'ಹುಂಡಿ ಕಾಲ್' ಅನ್ನುತ್ತಿದ್ದರು. ಅದನ್ನು ನಡೆಸುವ ಏಜೆಂಟುಗಳು ಅಲ್ಲಲ್ಲಿ ಇರುತ್ತಿದ್ದರು. ಅವರ ಮುಖೇನ ಕರೆಯನ್ನು ಮೊದಲೇ ಬುಕ್ ಮಾಡಿ ಯಾವ ನಂಬರಿಗೆ ಕರೆ ಮಾಡಬೇಕೆಂದು ಹೇಳಿಟ್ಟರೆ, ಇಂಥಹುದೇ ನಿಗದಿತ ಸಮಯದಲ್ಲಿ ಮನೆಯಲ್ಲಿರುವ ಲ್ಯಾಂಡ್‌ಲೈನಿಗೆ ಒಂದು ಫೋನ್ ಬರುತ್ತಿತ್ತು. ಅದನ್ನು ಸ್ವೀಕರಿಸುತ್ತಿರುವಂತೆಯೇ ಕರೆ ತಾವು ಮಾಡಬೇಕಾದ ನಂಬರಿಗೆ ಕನೆಕ್ಟ್ ಆಗುತ್ತಿತ್ತು. ಅಧಿಕೃತ ಅಂತರರಾಷ್ಟ್ರೀಯ ಕರೆಯ ಒಂದು ನಿಮಿಷದ ದರದಲ್ಲಿ ಹುಂಡಿಕಾಲ್‌ನಲ್ಲಿ ಹತ್ತು ನಿಮಿಷಗಳವರೆಗೂ ಮಾತನಾಡಬಹುದಿತ್ತು. ಇಂಥದೇ ವ್ಯವಸ್ಥೆಯನ್ನು ಚೇತನಾಳಿಗೆ ಮಾಡಿ ಕೊಟ್ಟು 'ಎಷ್ಟು ಬೇಕಾದರೂ ಮಾತಾಡು' ಎಂದಿದ್ದ ಚಂದ್ರಕಾಂತ.

ಮೊದಲಬಾರಿ ಹುಂಡಿ ಕಾಲ್‌ನಲ್ಲಿ ಅಮ್ಮನಿಗೆ ಕರೆ ಮಾಡುವಾಗ ಚೇತನಾ ತುಂಬಾ ಉತ್ಸುಕಳಾಗಿದ್ದಳು. ಹಿಂದೆಲ್ಲಾ ಮಾಡುವಂತೆ 'ಮತ್ತೆಲ್ಲಾ ಆರಾಮು... ಮತ್ತೆಲ್ಲಾ ಆರಾಮು' ಎನ್ನುತ್ತಾ ಆದಷ್ಟು ಕಡಿಮೆ ಸಮಯದಲ್ಲಿ ಮಾತು ಮುಗಿಸಬೇಕಾಗಿರಲಿಲ್ಲ ಈಗ. ಚಂದ್ರಕಾಂತನ ದಿನಚರಿ, ಕಸಬಾದ ನುಣುಪು ರಸ್ತೆಗಳು, ಖರ್ಜೂರದ ಗಿಡಗಳು, ನೀಟಾಗಿ ಜೋಡಿಸಿಟ್ಟಂತೆ ಕಾಣುವ ಕಟ್ಟಡಗಳು, ಸುಮಾರು ಎಂಟರಿಂದ ಹತ್ತುಸಾವಿರವಷ್ಟೇ ಇರಬಹುದಾದ ಅಲ್ಲಿಯ